**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ– 8/2023**

| | | | |
|---|---|---|---|
| **ಸಾಕ್ಷಿದಾರನ ಹೆಸರು** | : ದೀಪಕ್ | | **ಪಿ.ಡಬ್ಲ್ಯೂ**– 16 |
| **ತಂದೆಯ ಹೆಸರು** | : ಹನುಮಂತರಾಯ | | **ಸಿ.ಡಬ್ಲ್ಯೂ**– 24 |
| **ವಯಸ್ಸು** | : 35 ವರ್ಷ | | |
| **ಉದ್ಯೋಗ** | : ಮೆಡಿಕಲ್ ರೆಪ್ರೆಸೆಂಟೆಟೀವ್ | | |
| **ವಾಸಸ್ಥಳ** | : ಮಂಡಿಮೊಹಲ್ಲಾ, ಮೈಸೂರು. | | |

**ಸಾಕ್ಷಿಯನ್ನು ಈ ದಿನ ದಿಃ25.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**1.** ನನಗೆ ರಾಘವೇಂದ್ರ ಪರಿಚಯ ಇರುವುದಿಲ್ಲ. ಆರೋಪಿತರ ಪರಿಚಯ ಇರುವುದಿಲ್ಲ.

**2.** ಸಾಕ್ಷಿಯು ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ನೋಟೀಸ್ ಆಗಿದ್ದು, ಅದನ್ನು ನಿಶಾನೆ ಪಿ–24 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–24(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ಒಂದು ಬಾರಿ ಪೊಲೀಸ್ ಠಾಣೆಗೆ ಹೋದಾಗ ಹಾಕಿರುತ್ತೇನೆ. ಯಾವ ಕಾರಣಕ್ಕೆಂದು ನನಗೆ ತಿಳಿದಿರುವುದಿಲ್ಲ. ಘಟನೆ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಯಾವುದೇ ವ್ಯಕ್ತಿಯನ್ನು ಹಲ್ಲೆ

ಮಾಡಿರುವುದನ್ನು ನಾನು ನೋಡಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

3. 1 ನೇ ಆರೋಪಿ ನನ್ನ ಸಹಪಾಠಿ ಎಂದರೆ ಸರಿಯಲ್ಲ.

4. ದಿಃ-19.01.2020 ರಂದು ನನ್ನ ಸ್ನೇಹಿತ ರಾಘವೆಂದ್ರನನ್ನು ಬೆಲವತ್ತಾದಲ್ಲಿರುವ ಮನೆಗೆ ಡ್ರಾಪ್ ಮಾಡಿ, ಸುಮಾರು 11.55 ರ ಸುಮಾರಿಗೆ ವಾಪಸ್ಸು ಬರುತ್ತಿರುವಾಗ ಬೆಲವತ್ತಾ ಕ್ರಾಸಿನಲ್ಲಿ ಕೆಎಃ10 ಡಿಃ7303 ನಂಬರಿನ ಆಟೋ ಮಗುಚಿ ಬಿದಿದ್ದು, ಜನರು ಗುಂಪು ಸೇರಿಕೊಂಡಿದ್ದರು ಎಂದರೆ ಸರಿಯಲ್ಲ.

5. ಆಟೋದಲ್ಲಿನ ಒಬ್ಬ ಯುವಕ ಕೆಳಗೆ ಬಿದ್ದುಕೊಂಡಿದ್ದು, ಆತನಿಗೆ ನನ್ನ ಕ್ಲಾಸ್ ಮೇಟ್ ಭರತ, ರವಿ ಮತ್ತು ಸ್ನೇಹಿತರಾದ ಗಣೇಶ್, ಮಹೇಶ್ ಸೇರಿಕೊಂಡು ಆತನಿಗೆ ಕೈಗಳಿಂದ ಮೈಕೈ, ತಲೆಗೆ ಹೊಡೆದು ಕಾಲಿನಿಂದ ತುಳಿಯುತ್ತಿದ್ದರು, ಆಗ ನಾನು ಭರತನನ್ನು ಯಾಕೆ ಹೊಡೆಯುತ್ತಿದ್ದೀರಿ ಎಂದು ಕೇಳಿದ್ದಕ್ಕೆ ಜಮೀನಿನಲ್ಲಿ ಮೇಯುತ್ತಿದ್ದ ಅವರದೊಂದು ಮೇಕೆಯನ್ನು ಕಳ್ಳತನ ಮಾಡಿಕೊಂಡು ಆಟೋದಲ್ಲಿ ಬರುತ್ತಿದ್ದಾಗ, ಕ್ರಾಸ್ ನಲ್ಲಿ ಮಗುಚಿ ಬಿದಿದ್ದು, ಕಳ್ಳ ಸಿಕ್ಕಿಹಾಕಿಕೊಂಡನು ಎಂದು ಹೇಳಿದನು, ಆತನ ಹೆಸರು ಜಹೀರುದ್ದೀನ್ ಖಾನ್ ಕುರಿಮಂಡಿಯವನು, ಆಟೋದಲ್ಲಿ ಒಂದು ಮೇಕೆ ಇತ್ತು, ಸದರಿ ವ್ಯಕ್ತಿ ಹೊಟ್ಟೆ ಹಿಡಿದುಕೊಂಡು ಸುಸ್ತಾಗುತ್ತಿದ್ದೆ ಎಂದು ಹೇಳುತ್ತಿದ್ದನು ಎಂದರೆ ಸರಿಯಲ್ಲ.

**6.** ನಂತರ ಶಿವು ಮತ್ತು ನದಿಮ್ ಇಬ್ಬರು ಸೇರಿ ಒಬ್ಬನನ್ನು ಪ್ಯಾಷನ್ ಪ್ರೋ ಕೆಎಃ-09 ಹೆಚ್ ಎಃ2715 ನಲ್ಲಿ ಕೂರಿಸಿಕೊಂಡು ಲಕ್ಷೀಹೋಟೆಲ್ ಬಳಿ ಬಂದಾಗ, ಅಲ್ಲಿದ್ದ ರವಿ ತನ್ನ ತಲೆಯಿಂದ ಆತನ ಮುಖಕ್ಕೆ ಡಿಚ್ಚಿ ಹೊಡೆದನು, ಭರತ್ ಮತ್ತು ಶ್ರೀನಿವಾಸ್ ಆತನಿಗೆ ಕಾಲಿನಿಂದ ಒದ್ದರು, ಆತನ ಹೆಸರು ಕಾರ್ತಿಕ್ ಎಂದು ತಿಳಿಯಿತು. ನಂತರ ಶಿವು ಹೊಡೆಯುತ್ತಿದುದ್ದನ್ನು ತಡೆದು ತನ್ನಲ್ಲಿ ಇರಿಸಿಕೊಂಡೆನು ಎಂದರೆ ಸರಿಯಲ್ಲ.

**7.** ಸುಮಾರು 12-45 ರ ಸಮಯಕ್ಕೆ ಇಬ್ಬರು ಪೊಲೀಸರು ಸ್ಥಳಕ್ಕೆ ಬಂದು ನೋಡಿ ಯಾರು ಇವರಿಗೆ ಹೊಡೆದಿದ್ದು ಎಂದು ಕೇಳಿದಾಗ, ಅಲ್ಲಿದ್ದವರು ಯಾರು ಸಹ ಯಾರ ಹೆಸರನ್ನು ಹೇಳಲಿಲ್ಲ, ಗೋಪಾಲ್ ರವರು ನಮ್ಮ ಮೇಕೆಯನ್ನು ಕಳ್ಳತನ ಮಾಡಿಕೊಂಡು ಹೋಗುತ್ತಿದ್ದರಿಂದ ಇವರ ಮೇಲೆ ದೂರು ಕೊಡುತ್ತೇನೆಂದು ಹೇಳಿದರು, ಜಹಿರುದ್ದೀನ್ ಖಾನ್ ಎಂಬುವನು ಸಹ ಜನರೆಲ್ಲರೂ ಸೇರಿಕೊಂಡು ನಮ್ಮಿಬ್ಬರಿಗೆ ಹೊಡೆದ ಬಗ್ಗೆ ದೂರು ನೀಡುತ್ತೇನೆ, ಈಗ ಸುಸ್ತಾಗುತ್ತಿದ್ದು, ಮೊದಲು ಆಸ್ಪತ್ರೆಗೆ ಹೋಗುತ್ತೇವೆ ಎಂದು ಹೇಳಿದನು ಮತ್ತು ಕಾರ್ತಿಕ್ ಎಂಬುವನ ಕಣ್ಣಿನ ಬಳಿ ಊದಿಕೊಂಡಿದ್ದರಿಂ ಇಬ್ಬರನ್ನು ಆಸ್ಪತ್ರೆಗೆ ಕಳುಹಿಸಿಕೊಡಿ ಎಂದು ಅಲ್ಲಿದ್ದ ಜನರು ಸಹ ಹೇಳಿದ್ದರಿಂದ ಚಿಕಿತ್ಸೆ ಪಡೆದುಕೊಳ್ಳುವ ಸಲುವಾಗಿ ಇಬ್ಬರನ್ನು ಪೊಲೀಸರು ಆಟೋವೊಂದರಲ್ಲಿ ಕಳುಹಿಸಿಕೊಟ್ಟರು, ಆಟೋದೊಳಗಿದ್ದ ಮೇಕೆಯನ್ನು ಭರತನ ಅಪ್ಪ ಗೋಪಾಲ್ ರವರು ಹಿಡಿದುಕೊಂಡು ಹೊರಟು ಹೋದರು ಎಂದರೆ ಸರಿಯಲ್ಲ. ಜಹೀರುದ್ದೀನ್ ಖಾನ್ ಚಿಕಿತ್ಸೆ ಪಲಕಾರಿಯಾಗದೇ ಮರಣ ಹೊಂದಿದನು ಎಂದರೆ ಸರಿಯಲ್ಲ.

**8.** ವಿಚಾರಣೆ ಮಾಡಿದ ಪೊಲೀಸ್ ಇನ್ಸಪೆಕ್ಟರ್ ರವರು ಘಟನೆಯ ಹಿನ್ನೆಲೆಯುಳ್ಳ ವಿಡಿಯೋವನ್ನು ಈಗಾಗಲೇ ಅಮಾನತ್ತುಪಡಿಸಿಕೊಂಡಿದ್ದು, ತನಿಖೆ ಸಲುವಾಗಿ ಕಾಪಿ ಮಾಡಿಕೊಂಡಿರುವುದಾಗಿ ತಿಳಿಸಿ ತೋರಿಸಿದ ವಿಡಿಯೋ ನೋಡಿದೆ, ಅದರಲ್ಲಿ ದಿಃ- 19.01.2020 ರಂದು 11.53 ಗಂಟೆ ಸಮಯಕ್ಕೆ ಬೆಲವತ್ತ ಮುಖ್ಯ ರಸ್ತೆಯಲ್ಲಿ ಆಸ್ಪತ್ರೆಯ ಕಡೆಯಿಂದ ಆಟೋವೊಂದು ವೇಗವಾಗಿ ಬಂದು ಲಕ್ಷೀ ಹೋಟೆಲ್ ಬಳಿಯ ತಿರುವಿನಲ್ಲಿ ಆಟೋ ಮುಗುಚಿಕೊಂಡು ಬಿದ್ದಾಗ ಜಹಿರುದ್ದೀನ್ ಖಾನ್ ಎಂಬುವವನಿಗೆ ಹೊಡೆದವರು ಭರತ್ ಕುಮಾರ್, ರವಿ ಅಲಿಯಾಸ್ ವಡ್ಡ, ಶ್ರೀನಿವಾಸ ಎಂದು ಗುರುತಿಸಿದೆ, ಶಿವು ಮತ್ತು ನದೀಮ್ ಇಬ್ಬರು ಸ್ಕೂಟರ್ ನಲ್ಲಿ ಕರೆದುಕೊಂಡು ಬಂದಾಗ ಭರತ್ ಕುಮಾರ್, ಶ್ರೀನಿವಾಸ ಇಬ್ಬರು ಕೈ ಮತ್ತು ಕಾಲುಗಳಿಂದ ಹಲ್ಲೆ ಮಾಡಿರುವುದು ಹಾಗೂ ಶಿವುನ ತಮ್ಮ ರವಿ ಅಲಿಯಾಸ್ ವಡ್ಡ ತಲೆಯಿಂದ ಕಾರ್ತಿಕ ಎಂಬುವನ ಮುಖಕ್ಕೆ ಡಿಚ್ಚಿ ಹೊಡೆದು ಹಲ್ಲೆ ಮಾಡಿದ ವಿಡಿಯೋ ಆಗಿತ್ತು ಎಂದರೆ ಸರಿಯಲ್ಲ.

**9.** ಭರತನ ಜಮೀನಿನಲ್ಲಿ ಮೇಕೆ ಕಳ್ಳತನ ಮಾಡಿಕೊಂಡು ಹೋಗುತ್ತಿದ್ದರು ಎಂಬ ಕಾರಣಕ್ಕೆ ಕಾರ್ತಿಕ ಎಂಬುವವನಿಗೆ ಮಾರಣಾಂತಿಕವಾಗಿ ಹಲ್ಲೆ ಮಾಡಿದ ಮತ್ತು ಜಹಿರುದ್ದೀನ್ ಖಾನ್ ಎಂಬುವನಿಗೆ ಹಲ್ಲೆ ಮಾಡಿದ ಸಾಯಿಸಿದ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ ಎಂದು ಹೇಳಿಕೆಯನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆಗ ಆ ಸಮಯದಲ್ಲಿ ನೋಟೀಸ್ ನೀಡಿದ್ದರು ಎಂದರೆ ಸರಿಯಲ್ಲ. ಆರೋಪಿತರು ನನ್ನ ಪರಿಚಯಸ್ಥರಾಗಿ ಸ್ನೇಹಿತರಾಗಿರುವುದರಿಂದ ಅವರಿ ಸಹಾಯ ಮಾಡಲು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಶಾನೆ ಪಿ–25 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**